<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.113/2023</u>

ದಿಃ 14.02.2024
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-2 Pw-2

| | | |
|---|---|---|
| ಹೆಸರು | ಃ | ನಿಂಗರಾಜು |
| ತಂದೆಯ ಹೆಸರು | ಃ | ಬೋರಯ್ಯ |
| ವಯಸ್ಸು | ಃ | 67 ವರ್ಷ |
| ಉದ್ಯೋಗ | ಃ | ನಿವೃತ್ತ ನೌಕರ |
| ವಾಸಸ್ಥಳ | ಃ | ಉಜ್ಜನಹಳ್ಳಿ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ಚಾಸಾ.1 ನನ್ನ ಅತ್ತಿಗೆ.

2. ನನಗೆ ಚಾಸಾ.3ರಿಂದ 13 ಗೊತ್ತು.

3. ಚಾಸಾ.1 ಮತ್ತು ನಾನು ಹಿಂದೂ ಆದಿ ಕರ್ನಾಟಕ ಜಾತಿಗೆ ಸೇರಿದವರಾಗಿರುತ್ತೇವೆ.

4. ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಒಕ್ಕಲಿಗ ಸಮುದಾಯಕ್ಕೆ ಸೇರಿದವರಾಗಿದ್ದು ನನಗೆ ಗೊತ್ತು.

5. ಅವರಿಗೆ ನಮ್ಮ ಜಾತಿ ಗೊತ್ತು.

6. ಉಜ್ಜನಹಳ್ಳಿ ಕಾಲೋನಿ ಸರ್ವೆ ನಂಬರ್.56/2ರಲ್ಲಿ ಸರ್ಕಾರದವರು 1 ಎಕರೆ 6 ಗುಂಟೆ ಜಮೀನನ್ನು ನಮ್ಮ ಆದಿ ಕರ್ನಾಟಕ

ಸಮುದಾಯದವರಿಗೆ ಸೈಟ್‌ಗಳನ್ನು ಹಂಚಿಕೆ ಮಾಡಿ, ಎ.ಕೆ. ಕಾಲೋನಿ ಎಂದು ಮಾಡಿರುತ್ತಾರೆ.

7. ಸದರಿ ಸೈಟ್‌ಗಳಲ್ಲಿ ಒಂದು ಸೈಟನ್ನು ನನ್ನ ತಾಯಿಯಾದ ಸಿದ್ದಮ್ಮ ಇವಳ ಹೆಸರಿನಲ್ಲಿ ಮಂಜೂರು ಮಾಡಿರುತ್ತಾರೆ.

8. ಸದರಿ ನಮ್ಮ ಸೈಟಿನ ಪಕ್ಕದಲ್ಲಿ ಆರೋಪಿತರಿಗೆ ಸಂಬಂಧಿಸಿದ ಜಮೀನು ಇರುತ್ತದೆ.

9. ಈಗ ಸುಮಾರು 10 ತಿಂಗಳುಗಳ ಹಿಂದೆ ಒಂದು ದಿನ, ಚಾಸಾ.1 ಇವಳು ಸದರಿ ನಮ್ಮ ಸೈಟಿನಲ್ಲಿ ಮಧ್ಯಾಹ್ನ ಸುಮಾರು 2.00 ಗಂಟೆ ಸಮಯದಲ್ಲಿ ಸ್ವಚ್ಛಗೊಳಿಸಲು ಹೋಗಿದ್ದಾಗ, ಆರೋಪಿತರು ಅಲ್ಲಿಗೆ ಬಂದು ಅವಳ ಜೊತೆಗೆ ಜಗಳ ಕಾಯ್ದು, ಸದರಿ ಸೈಟ್‌ನಲ್ಲಿ ನಮಗೆ ಸ್ವಚ್ಛ ಮಾಡಲು ಅವಕಾಶವಿಲ್ಲ ಎಂದು ಹೇಳಿ ಸದರಿ ಸೈಟು ನಮ್ಮ ಜಮೀನಾಗಿರುತ್ತದೆ ಎಂದು ತಂಟೆ ಮಾಡಿರುತ್ತಾರೆ.

10. ಅದೂ ಅಲ್ಲದೇ ಆರೋಪಿತರು ಚಾಸಾ.1 ಇವಳಿಗೆ ಅವಾಚ್ಯ ಶಬ್ದಗಳಿಂದ ಹೊಲತಿ ಎಂದು ಜಾತಿ ನಿಂದನೆ ಸಹ ಮಾಡಿ ಪ್ರಾಣದ ಬೆದರಿಕೆಯನ್ನೂ ಸಹ ಹಾಕಿರುತ್ತಾರೆ.

11. ಆ ಸಮಯದಲ್ಲಿ ಚಾಸಾ.3, 5, 10, 12, 13 ಮತ್ತು ನಾನು ಜಗಳವನ್ನು ನೋಡಿ ಬಿಡಿಸಿಕೊಂಡಿರುತ್ತೇವೆ.

ಪಾಟೀ ಸವಾಲುಃ ಶ್ರೀ. ಎಸ್.ಎನ್.ಜಿ., ವಕೀಲರಿಂದ 2 ಮತ್ತು 3ನೇ ಆರೋಪಿಗಳ ಪರವಾಗಿಃ ಆರೋಪಿ ಪರ ವಕೀಲರು ಕೂಗಿಸಲಾಯಿತು. ಗೈರು ಹಾಜರಿರುತ್ತಾರೆ. ಆರೋಪಿತರ ಕೋರಿಕೆಯ ಮೇರೆಗೆ ಪ್ರಸ್ತುತ ಸಾಕ್ಷಿಗೆ ರೂಪಾಯಿ 500/- ಸಾಕ್ಷಿ ಭತ್ಯೆಯನ್ನು ಕೊಡುವ ಕರಾರಿನ ಮೇರೆಗೆ ಪಾಟೀ ಸವಾಲಿಗೆಂದು ಸಮಯಾವಕಾಶ ನೀಡಲಾಗಿರುತ್ತದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.